159ನ್6
(59)

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ರವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (MUDA) 'ಹೆಚ್' ಕ್ಯಾಟಗರಿ ಅಡಿಯಲ್ಲಿ ಅರ್ಜಿ ಸಲ್ಲಿಸಿ ಮುಂಗಡ ಹಣ ಪಾವತಿಸಿರುವ ಅರ್ಹ ಸಾಧಕರಿಗೆ, ಉಚ್ಚ ನ್ಯಾಯಾಲಯದ ಆದೇಶವಿದ್ದರೂ ದೇವನೂರು 3ನೇ ಹಂತದ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡದೇ ವಿಳಂಬ ಮಾಡಿರುತ್ತಿರುವುದನ್ನು ತಡೆದು ತಕ್ಷಣವೇ ನಿವೇಶನ ಹಂಚಿಕೆ ಮಾಡುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು-1991ರ ನಿಯಮ 13(2)ರಲ್ಲಿ ತಿಳಿಸಿರುವ ಹೆಚ್ ಪ್ರವರ್ಗದಡಿ ನಿವೇಶನ ಹಂಚಿಕೆ ಮಾಡಲು ಪ್ರಸ್ತುತ ಯಾವುದೇ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ.

ಸರ್ಕಾರದ ಪತ್ರ ಸಂಖ್ಯೆ: ನಅಇ 302 ಮೈಅಪ್ರಾ 2020 (ಇ), ದಿನಾಂಕ: 30.01.2021ರಲ್ಲಿ ನೀಡಿದ ನಿರ್ದೇಶನದನ್ವಯ ಬಿಡಿ ನಿವೇಶನಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 291 ಅಪ್ರಾವಿ 1998, ದಿನಾಂಕ: 24.11.2000ರಲ್ಲಿನ ನಿರ್ದೇಶನದಂತೆ 188 ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 08.02.2023 ರಂದು ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಯಂತೆ ಒಟ್ಟು 561 ಅರ್ಜಿಗಳು ಸ್ವೀಕೃತವಾಗಿರುತ್ತದೆ, ಈ ಪೈಕಿ ಶ್ರೀ ನಿಂಗರಾಜು ಬಿ.ಆರ್ (ಮಾಜಿ ಸೈನಿಕರು), ಶ್ರೀ ಅಜಿತ್ ಮತ್ತು ಡಾ|| ವರ್ಷ ಪುರಣಿಕ್ ಎನ್ನುವವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 26249/2025 (LB-RES) ರಲ್ಲಿ ದಿನಾಂಕ: 05.03.2026ರಂದು ಆದೇಶ ಹೊರಡಿಸಿದ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯಲ್ಲಿನ 2ನೇ ಪ್ರತಿವಾದಿಯಾದ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿದಾರರ ಅರ್ಜಿಗಳ ಸಂಬಂಧ 06 ತಿಂಗಳೊಳಗೆ ನಿಯಮಾನುಸಾರ ಸೂಕ್ತ ಆದೇಶ ಹೊರಡಿಸಲು ನಿರ್ದೇಶನ ನೀಡಿದೆ.

ಮೇಲ್ಕಂಡ 188 ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ದಿನಾಂಕ: 08.08.2025ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಮೇಲ್ಕಂಡ 03 ಅರ್ಜಿದಾರರ ಅರ್ಜಿಗಳೂ ಸೇರಿದಂತೆ ಒಟ್ಟು 561 ಅರ್ಜಿಗಳ ಬಗ್ಗೆ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಪ್ರಾಧಿಕಾರದ ಉಪಸಮಿತಿಯನ್ನು ರಚಿಸಿದ್ದು, ಸದರಿ ಉಪಸಮಿತಿಯ ಶಿಫಾರಸ್ಸನ್ನು ಪ್ರಾಧಿಕಾರದ ಸಭೆಗೆ ಮಂಡಿಸಲು ನಿರ್ಣಯಿಸಲಾಗಿರುತ್ತದೆ. ಸದರಿ ಉಪಸಮಿತಿಯು ದಿನಾಂಕ: 09.03.2026ರಂದು ನಡೆಸಿದ ಸಭೆಯಲ್ಲಿ ಹೆಚ್ಚಿನ ಮಾಹಿತಿಗಳೊಂದಿಗೆ ಉಪಸಮಿತಿಯ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಿ ಸಭೆಯನ್ನು ಮುಂದೂಡಲಾಗಿರುತ್ತದೆ.

ಪ್ರಾಧಿಕಾರದ ಉಪಸಮಿತಿಯ ಸಭೆಯಲ್ಲಿ ಮೇಲ್ಕಂಡ 188 ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ವಿಷಯವನ್ನು ಮಂಡಿಸಿ ಸದರಿ ಸಮಿತಿಯ ನಿರ್ಣಯವನ್ನು ಪ್ರಾಧಿಕಾರದ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗುವುದು.

**ಸಂಖ್ಯೆ: ನಅಇ 365 ಮೈಅಪ್ರಾ 2026**

**(ಡಾ. ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು